**ಮರು ಪ್ರಮಾಣೀಕರಿಸಲಾದ ದಿನಾಂಕ: 05.08.2026.**

**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ. H.S.G ವಕೀಲರಿಂದ :-**

ನೀವು ಹಾಗೂ 8 ಮತ್ತು 9ನೇ ಪ್ರತಿವಾದಿಯು 2001-02 ನೇ ಸಾಲಿನಲ್ಲಿ ಜನಿಸಿರುತ್ತೀರಿ ಎಂದರೆ ಸಾಕ್ಷಿಯು 8ನೇ ಪ್ರತಿವಾದಿಯು 1998 ನೇ ಇಸವಿಯಲ್ಲಿ ಜನಿಸಿರುತ್ತಾರೆ ಹಾಗೂ 9ನೇ ಪ್ರತಿವಾದಿಯು 2003 ಹಾಗೂ ವಾದಿಯು 2001 ನೇ ಇಸವಿಯಲ್ಲಿ ಜನಿಸಿರುತ್ತಾರೆ. ಕದರಯ್ಯರವರ ತಂದೆಯ ಹೆಸರು ಜವರಯ್ಯ. ಜವರಯ್ಯನವರ 3 ಜನ ಹೆಣ್ಣು ಮಕ್ಕಳುಗಳಾದ ಜಯಮ್ಮ, ಸಣ್ಣಕ್ಕ ಹಾಗೂ ಗೌರಮ್ಮರವರು ಜೀವಂತವಿದ್ದಾರೋ ಅಥವಾ ಮರಣ ಹೊಂದಿದ್ದಾರೋ ಎಂದರೆ ಸಾಕ್ಷಿಯು ಅವರು ಮೂರು ಜನರು ಮರಣ ಹೊಂದಿರುತ್ತಾರೆ, ಆದರೆ ಯಾವ ದಿನಾಂಕದಂದು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಜವರಯ್ಯನವರು ಮುಂಚಿತವಾಗಿಯೇ ಫವತಿ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಐಟಂ ನಂಬರ್ -1 ರಿಂದ 5ನೇ ಆಸ್ತಿಗಳು ಜವರಯ್ಯನವರ ತಂದೆಯಿಂದ ಬಂದಿರತಕ್ಕಂತಹ ಆಸ್ತಿ ಎಂದರೆ ಸರಿಯಲ್ಲ. ಈ ಎಲ್ಲಾ ಸ್ವತ್ತುಗಳನ್ನು ಕದರಯ್ಯನವರು ಖರೀದಿ ಮಾಡಿರತಕ್ಕಂತಹ ಸ್ವತ್ತಾಗಿರುತ್ತದೆ. ದಾವಾ ಸ್ವತ್ತಿನ ಐಟಂ ನಂಬರ್-1 ಮತ್ತು 2ನೇ ಸ್ವತ್ತುಗಳನ್ನು ನನ್ನ ತಂದೆಯವರೇ ಖರೀದಿ ಮಾಡಿ ನಮ್ಮ ಅಜ್ಜಿಯವರ ಹೆಸರಿಗೆ ಬರೆಸಿರುತ್ತಾರೆ. ದಾವಾ ಸ್ವತ್ತಿನ ಐಟಂ ನಂಬರ್-3 ರಿಂದ 5ನೇ ಸ್ವತ್ತುಗಳನ್ನು ನನ್ನ ತಂದೆಯವರೇ ಖರೀದಿ ಮಾಡಿರುತ್ತಾರೆ. ಈ ಮೇಲೆ ಹೇಳಿರುವ ಸಂಗತಿಗಳ ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಹಾಗೂ ಅದರಂತೆ ಯಾರಿಂದ ಖರೀದಿ ಮಾಡಿದ್ದಾರೆ ಎಂಬುವ ವಿಷಯವನ್ನು ತಿಳಿಸಿಲ್ಲ. ಸದರಿ ಕ್ರಯಕ್ಕೆ ಖರೀದಿ ಮಾಡಿರುವ ದಾಖಲಾತಿಗಳನ್ನು ನಾನುನೋಡಿರುತ್ತೇನೆ, ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕಾಲಾವಕಾಶ ನೀಡಿದಲ್ಲಿ ಅವುಗಳನ್ನು ಹಾಜರುಪಡಿಸುವುದಾಗಿ ಸಾಕ್ಷಿಯು ತಿಳಿಸುತ್ತಾರೆ. ಯಾವ ವರ್ಷದಲ್ಲಿ ಸದರಿ ದಾಖಲಾತಿಗಳನ್ನು ನಾನು ನೋಡಿದ್ದೇನೆ ಎಂದು ಖಚಿತವಾಗಿ ಹೇಳಲು

ಸಾಧ್ಯವಿಲ್ಲ. ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಸಮಯದಲ್ಲಿ ಆ ದಾಖಲಾತಿಗಳನ್ನೆಲ್ಲಾ ನಾನು ನೋಡಿರುತ್ತೇನೆ. 1 ರಿಂದ 5ನೇ ಐಟಂನ ಸ್ವತ್ತುಗಳು ನಿಮ್ಮ ತಂದೆಯವರಿಗೆ ಫವತಿ ವಾರಸು ಮುಖಾಂತರ ಬಂದಿರತಕ್ಕಂತಹ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಯವರು 2010 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನಿಮ್ಮ ತಂದೆಯವರು ತೀರಿಕೊಂಡ ಬಳಿಕ ನಿಮ್ಮ ಕುಟುಂಬದ ಸದಸ್ಯರೆಲ್ಲರೂ ದಾವಾ ಸ್ವತ್ತುಗಳಲ್ಲಿ ಹಕ್ಕುದಾರರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರತಿವಾದಿಗಳು ನನ್ನ ತಂದೆಯ ಆಸ್ತಿಗೆ ಹಕ್ಕುದಾರರು ಆಗಿರುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಕದರಯ್ಯನವರ ಮೂರು ಜನ ಸಹೋದರಿಯರ ಹೆಸರುಗಳನ್ನು ದಾವಾ ಸ್ವತ್ತುಗಳಲ್ಲಿ ಹಕ್ಕು ಇದೆಯೋ ಇಲ್ಲವೋ ಹಾಗೂ ಅವರ ಹೆಸರುಗಳು ಏಕೆ ಸೇರಿಸಿದ್ದೀರಿ ಎಂದು ಕೇಳಿದಾಗ ಸಾಕ್ಷಿಯು ಅವರಿಗೆ ಹಕ್ಕು ಇರುವುದಿಲ್ಲ ಎಂದು ಹೇಳಿ ಅವರ ಹೆಸರುಗಳ ಬಗ್ಗೆ ನಮೂದು ಮಾಡಿರುವುದಾಗಿ ತಿಳಿಸುತ್ತಾರೆ. ನಿಮ್ಮ ಪ್ರತಿವಾದ ಪತ್ರದ 7ನೇ ಪ್ಯಾರಾದಲ್ಲಿ ಅವರುಗಳಿಗೆ ಆಸ್ತಿಯ ಮೇಲೆ ಹಕ್ಕು ಇದ್ದರೂ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲದ ಕಾರಣ ಪ್ರಸ್ತುತ ದಾವೆಯು ನಿಲ್ಲುವುದಿಲ್ಲ ಎಂದು ನಮೂದಿಸಿರುತ್ತೀರಿ ಎಂದರೆ ಸರಿ. ಸದರಿಯವರಿಗೆ ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿ ಆಗುತ್ತದೆ ಎಂಬ ಕಾರಣಕ್ಕೆ ಅದನ್ನು ನಮೂದಿಸಿದ್ದೀರಿ ಎಂದರೆ ಸರಿ. ನಿಮ್ಮ ತಂದೆ ಹಾಗೂ ಅವರ ಸಹೋದರಿಯವರಿಗೆ ದಾವಾ ಸ್ವತ್ತಿನ ಐಟಂ ನಂಬರ್-1 ರಿಂದ 5 ನೇ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಹೇಳುವ ಹಾಗೇ ಅವರ ಪ್ರತಿವಾದ ಪತ್ರದಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಹಾಗೂ ಜ್ಯೋತಿರವರು 1996 ನೇ ಇಸವಿಯಲ್ಲಿ ಮದುವೆಯಾಗಿದ್ದು ಅಂದಿನಿಂದ ಅವರಿಬ್ಬರೂ ಅನ್ಯೋನ್ಯವಾಗಿರಲಿಲ್ಲ, ಆದರೆ 2009 ನೇ ಇಸವಿಯಲ್ಲಿ ಅವರು ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ. ಸದರಿ ಜ್ಯೋತಿರವರು ನಮ್ಮ ತಾಯಿಯ ತಮ್ಮನ ಮಗಳಾಗಬೇಕು. 1ನೇ ಪ್ರತಿವಾದಿಯು ನಿಮ್ಮ ಮಾವನವರಾದ ಗಂಗಾಧರಯ್ಯನವರ ಮನೆಯಲ್ಲೇ ಬೆಳೆದಿದ್ದು ಆದ ಕಾರಣ ಅವರ ಆರೋಗ್ಯ ಸ್ಥಿತಿಯ

ಬಗ್ಗೆ ಎಲ್ಲಾ ಮಾಹಿತಿ ಇದ್ದು ಅವರ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಹಾಗೂ 8 ಮತ್ತು 9ನೇ ಪ್ರತಿವಾದಿಗಳು ಅವರಿಬ್ಬರೂ ಅನ್ಯೋನ್ಯವಾಗಿ ಇದ್ದಂತಹ ಸಮಯದಲ್ಲಿಯೇ ಜನಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಮೂರ್ಛೆ ರೋಗ ಇದ್ದು ಅವರ ಖರ್ಚು ವೆಚ್ಚವನ್ನೆಲ್ಲಾ ನಮ್ಮ ತಂದೆಯವರೇ ನೋಡಿಕೊಳ್ಳುತ್ತಿದ್ದರು. ಆ ವಿಚಾರದ ಬಗ್ಗೆ ಯಾವುದೇ ಸಂಬಂಧಪಟ್ಟ ದಾಖಲಾತಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿ. Crl.Misc.57/2011 ಚಿಕ್ಕನಾಯಕನಹಳ್ಳಿಯ ನ್ಯಾಯಾಲಯದಲ್ಲಿ ಜ್ಯೋತಿರವರು ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದು ಅದರಲ್ಲಿ 1ನೇ ಪ್ರತಿವಾದಿಯ ವಿಚಾರಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಮಾತಿಹಿ ಇದೆ. ಆದರೆ ಅದರ ವಿಚಾರಣೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿ ಅರ್ಜಿಯ ಆದೇಶದಂತೆ 1ನೇ ಪ್ರತಿವಾದಿಯು ಜ್ಯೋತಿರವರಿಗೆ 3000 ರೂಪಾಯಿ ತಿಂಗಳಿಗೆ ಜೀವನಾಂಶ ನೀಡಬೇಕೆಂದು ಆಗಿದ್ದು ಅದರಂತೆ ನಡೆದುಕೊಳ್ಳದ ಕಾರಣ 1ನೇ ಪ್ರತಿವಾದಿಯನ್ನು 2 ಬಾರಿ ಜೈಲಿಗೆ ಹಾಕಿರುತ್ತಾರೆ. ನಂತರ ನನ್ನ ತಾಯಿಯವರು ಸದರಿ ಜೀವನಾಂಶದ ಹಣವನ್ನು ಕಟ್ಟಿ 1ನೇ ಪ್ರತಿವಾದಿಯನ್ನು ಬಿಡಿಸಿಕೊಂಡು ಬಂದಿರುತ್ತಾರೆ. ವಾದಿಯು ಅವರ ತಾಯಿಯ ಜೊತೆಗೆ ಹೋದ ಬಳಿಕ Guardian and Wardship ಅರ್ಜಿಯಲ್ಲಿ ಮಗನನ್ನು ಕಳುಹಿಸಿ ಕೊಡಬೇಕು ಎಂದು 1ನೇ ಪ್ರತಿವಾದಿಯು G & Wsc.1/2010 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸರಿ. 1ನೇ ಪ್ರತಿವಾದಿಗೆ ಆಗಾಗ ಮೂರ್ಛೆ ಹೋಗುತ್ತಿದ್ದ ಕಾರಣ ಅಲ್ಲೇ ಸ್ಥಳದಲ್ಲಿರತಕ್ಕಂತಹ ವೈದ್ಯರ ಬಳಿ ತೋರಿಸುತ್ತಿದ್ದೆವು, ಮೂರ್ಛೆ ಹೋದಂತಹ ಸಮಯದಲ್ಲಿ ಅವರು ಕಾಲು ಅಥವಾ ಕೈಗಳನ್ನು ತಗುಲಿಸಿಕೊಂಡು ಮುರಿದುಕೊಳ್ಳುತ್ತಿದ್ದ ಕಾರಣ ಚಿಕ್ಕಜಾಜೂರು ಎಂಬ ಊರಿನಲ್ಲಿ ನಾಟಿ ಔಷಧಿಯನ್ನು ಕೊಡಿಸುತ್ತಿದ್ದೆವು. ಅದಕ್ಕೆ ಬಹಳ ಖರ್ಚು ಆಗಿದೆ. ಸದರಿ ಖರ್ಚು ವೆಚ್ಚದ ಬಗ್ಗೆ ಯಾವುದೇ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1ನೇ ಪ್ರತಿವಾದಿಗೆ ಯಾವುದೇ ರೀತಿಯ ಮೂರ್ಛೆ ಹೋಗುವ ರೋಗವಿಲ್ಲದಿದ್ದರೂ ಜ್ಯೋತಿ ಹಾಗೂ ಅವರ ಮಕ್ಕಳಿಂದ ಆಸ್ತಿಯನ್ನು

ತಪ್ಪಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಲಿಖಿತ ಪತ್ರಕ್ಕೆ ಓದಿ ತಿಳಿದುಕೊಂಡು ಸರಿಯಾಗಿದೆ ಎಂದ ನಂತರವೇ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ನಿಡಿ-12 ರ ನಂತರ ಇರುವ ದಾಖಲಾತಿಯನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿರುವ 1ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ Crl.Misc.57/2011 ರಲ್ಲಿ Ex.R.17 to 30 ರವರೆಗೂ ಇರುವ ದಾಖಲಾತಿಯು 1ನೇ ಪ್ರತಿವಾದಿಯು ಸದರಿ ಅರ್ಜಿಯಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಗಿದೆ. ಆದರೆ ವೈದ್ಯರ ಮಾತಿನಂತೆ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗೆ ತೋರಿಸಿ ಎಂದು ಸೂಚಿಸಿದ ಬಳಿಕ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ತೋರಿಸಿರುವುದಾಗಿ ನುಡಿಯುತ್ತಾರೆ. 1ನೇ ಪ್ರತಿವಾದಿಯು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡ ಬಳಿಕ ಯಾವ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಅವರು ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಾರೋ ಇಲ್ಲವೋ ಎಂಬುದರ ಬಗ್ಗೆಯೂ ಸಹ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಅವರ ಆರೋಗ್ಯ ಈಗಲೂ ಸಹ ಸುಸ್ಥಿತಿಯಲ್ಲಿ ಇರುತ್ತದೆ, ಯಾವುದೇ ಔಷಧಿಯನ್ನು ತೆಗೆದುಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಅವರ ಆರೋಗ್ಯದ ಖರ್ಚಿಗೆಂದು ನೀವು ಹಣವನ್ನು ನೀಡುತ್ತಿರುವ ವಿಷಯವು ಶುದ್ಧ ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಪ್ರತಿವಾಪತ್ರದಲ್ಲಿ ವಾದಿಯ ತಾಯಿಯು ಕದರಯ್ಯ ಹಾಗೂ ಇತರೇ ಕುಟುಂಬಸ್ಥರ ಸಮ್ಮುಖದಲ್ಲಿ ದಿನಾಂಕಃ 27.07.2002 ರಂದು ಬರೆದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ವಾದಿಯ ತಂದೆಯಲ್ಲ, ವಾದಿಯ ತಾಯಿ ಎಂದು ನುಡಿಯುತ್ತಾರೆ. ನಿಡಿ-21 ರ ಆಧಾರದ ಮೇಲೆ ಲಿಖಿತ ಪತ್ರವನ್ನು ತಯಾರು ಮಾಡಿರುತ್ತೀರಿ ಎಂದರೆ ಸರಿ. ಒಪ್ಪಿಗೆ ಪತ್ರ ಬೇರೆ ಹಾಗೂ ಒಪ್ಪಿಗೆ ಪತ್ರದ ಕರಾರು ಬೇರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ-21 ನ್ನು ನಾನು ಖರೀದಿ ಮಾಡಿರುವುದಿಲ್ಲ. ನಿಡಿ-21 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಡಿ-21 1ನೇ

ಪ್ರತಿವಾದಿಯ ಬಳಿ ಇರುತ್ತದೆ. ಅದನ್ನು ಯಾವ ದಿವಸ ಖರೀದಿ ಮಾಡಿದ್ದರು ಎಂಬುದನ್ನು ನಾನು ಗಮನಿಸಿರುವುದಿಲ್ಲ. ನಿಡಿ-21 ರಲ್ಲಿ ಬರವಣಿಗೆಯಾಗಿರುವ ಸಂಗತಿ ನನಗೆ ತಿಳಿದಿತ್ತು, ಆದರೆ ಅದನ್ನು ಯಾವಾಗ ಖರೀದಿ ಮಾಡಿದ್ದರು ಎಂಬುದು ನನಗೆ ತಿಳಿದಿಲ್ಲ. ನಿಡಿ-21 ನ್ನು ದಿನಾಂಕಃ 19.07.2002 ರಲ್ಲಿ ಖರೀದಿ ಮಾಡಿರುವುದಾಗಿ ಕಂಡು ಬರುತ್ತದೆ ಎಂದರೆ ಸಾಕ್ಷಿಯು ಅದು ಸರಿಯಾಗಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 2002 ರಲ್ಲಿ ಅದು ಖರೀದಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-21 ನ್ನು ದೇವರಾಜಯ್ಯನವರು ತಯಾರು ಮಾಡಿರುತ್ತಾರೆ. ಸದರಿ ದೇವರಾಜಯ್ಯನವರು 1980ನೇ ಇಸವಿಯಿಂದ ಕರಡು ತಯಾರಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು M.A., ಮಾಡಿರುತ್ತೇನೆ. 2002 ನೇ ಇಸವಿಯಲ್ಲಿ ಜ್ಯೋತಿರವರು ನಿಮ್ಮ ಮನೆಯಲ್ಲಿಯೇ ಕೆಲಸವನ್ನು ನಿರ್ವಹಿಸುತ್ತಿದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದಾದರೂ ದಾಖಲಾತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ಕಾನೂನು ಸಲಹೆಯನ್ನು ಪಡೆಯುತ್ತೀರಿ ಎಂದರೆ ಸರಿ. ನಿಡಿ-21 ರಲ್ಲಿ ಒಡಂಬಡಿಗೆ ಕರಾರು ಎಂದು ಇರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಹಕ್ಕು ವರ್ಗಾವಣೆ ಆಗಬೇಕಾಗಿದ್ದಲ್ಲಿ ಅದು ನೋಂದಣಿಯಾಗಬೇಕು ಎಂದರೆ ನನಗೆ ಗೊತ್ತಿಲ್ಲ. ನಿಡಿ-21 ರ ದಾಖಲಾತಿಯನ್ನು 1ನೇ ಪ್ರತಿವಾದಿ ಹಾಗೂ ಅವರ ಕುಟುಂಬಸ್ಥರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. 2002 ನೇ ಸಾಲಿನಿಂದ ನಿಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. 4ನೇ ಪ್ರತಿವಾದಿಯು ದಾವಾ ಸ್ವತ್ತಿನ 6ನೇ ಐಟಂನ ಆಸ್ತಿಯನ್ನು ಕುಟುಂಬದ ಆದಾಯದ ಮೇರೆಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಗೆ ಸ್ವಂತ ಆದಾಯ ಬರುತ್ತಿದೆ ಎಂದು ತೋರಿಸುವುದಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲದ ಕಾರಣ 6ನೇ ಐಟಂ ಸ್ವತ್ತನ್ನು ಕುಟುಂಬದ ಆಸ್ತಿಗೆ ಸೇರುತ್ತದೆ ಎಂದು ಹೇಳುತ್ತೇವೆ ಎಂದರೆ ಸರಿಯಲ್ಲ. ವಾದಿಯು ಸೇರಿದಂತೆ ನಿಮ್ಮ ಕುಟುಂಬದ ಸದಸ್ಯರು ಯಾರ ನಡುವೆಯೂ ವಿಭಾಗವಾಗಿಲ್ಲದ ಕಾರಣ 6ನೇ ಐಟಂ ಸ್ವತ್ತನ್ನು ಒಳಗೊಂಡಂತೆ ವಾದಿಗೆ ¼

ಭಾಗಾಂಶ ಅವರ ತಂದೆಯ ಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಅವರ ಆಸ್ತಿಗಳನ್ನು ಲಪಟಾಯಿಸುವ ಉದ್ಧೇಶದಿಂದ ನ್ಯಾಯಾಲಯಕ್ಕೆ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ಸಾಕ್ಷಿದಾರರುಗಳು ನಿಮ್ಮ ಕುಟುಂಬಕ್ಕೆ ಬಹಳ ಆತ್ಮೀಯರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳೆಲ್ಲವೂ ತಿಪಟೂರಿನ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರತಕ್ಕಂತಹ ಆಸ್ತಿಗಳು ಎಂದರೆ ಸರಿಯಲ್ಲ. ಐಟಂ ನಂಬರ್ - 3 ರಿಂದ 5ನೇ ಸ್ವತ್ತುಗಳಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿ ಅದರಿಂದ ಬರತಕ್ಕಂತಹ ಬಾಡಿಗೆಯು 1 ರಿಂದ 1.5 ಲಕ್ಷ ರೂಪಾಯಿಯಾಗಿದ್ದು ಅದನ್ನು ವಾದಿಯೊಂದಿಗೆ ಹಂಚಿಕೊಳ್ಳದೇ ನೀವೇ ಅನುಭವಿಸಿಕೊಂಡು ಹೋಗುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಜೀವನಾಂಶದ ಅರ್ಜಿಯಲ್ಲಿ ಇಂದಿಗೂ ಜೀವನಾಂಶವನ್ನು ನೀಡದೇ ಕದ್ದು ಮುಚ್ಚಿ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮಗೆ ಹಾಗೂ 1ನೇ ಪ್ರತಿವಾದಿ ಹಾಗೂ ಅವರ ಮಕ್ಕಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇದ್ದ ಕಾರಣ ನಿಡಿ-21 ನ್ನು ನೀವೇ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದವರೆದು 1ನೇ ಪ್ರತಿವಾದಿರವರೇ ನಿಡಿ-21 ನ್ನು ಬರೆದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಹಾಗೂ ಅವರ ಪತ್ನಿಯೊಡನೆ ಸಂಬಂಧ ಚೆನ್ನಾಗಿಲ್ಲರುವ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**